ಮಿನಿವಾಟರ್, ಪೈಪ್‌ವಾಟರ್ ಎಷ್ಟೆಷ್ಟು ನಾವು ಮಾಡುತ್ತಿದ್ದೇವೆ ಯಾವ ಆಧಾರದ ಮೇಲೆ ಮಾಡುತ್ತಿದ್ದೇವೆ, ಎಂಬುದೆಲ್ಲಾ ನಿಮಗೆ ಗೊತ್ತಿದೆ. ಈಗ ತಾವು ತಾಲೂಕುವೈಸ್ ವಿಲೇಜ್‌ವೈಸ್ ಮಾಹಿತಿ ಕೇಳಿದ್ದೀರಿ. ಆ ಮಾಹಿತಿಯನ್ನು ಸಂಗ್ರಹಿಸಲಿಕ್ಕೆ ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆ ದಿನ ಪ್ರಶ್ನೆ ಕೇಳಿದೆ ಆದಕ್ಕೆ ; ಉತ್ತರವಿಲ್ಲ ; ಹಸಿರು ಕಾರ್ಡು ಪ್ರಶ್ನೆ ಕೇಳಿದೆ, ಆದಕ್ಕೂ ಉತ್ತರವಿಲ್ಲ. ಇದೊಂದೇ ಅಲ್ಲ, ನನ್ನ ಮೂರ್ನಾಲ್ಕು ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರ ಇಲ್ಲಾಂದರೆ ಕಾರಣವೇನು?

ಅಧ್ಯಕ್ಷರು : – ಆಯಿತು, ಒಂದು ವಾರ ಟೈಂ ಕೇಳಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ : ಆ ಮಾಹಿತಿ ಬಂದ ತಕ್ಷಣ ಉತ್ತರ ಕಳುಹಿಸಿ ಕೊಡುತ್ತೇವೆ.

ವಿಷಯ : – ಪಶುವೈದ್ಯಕೀಯ ಮಹಾವಿದ್ಯಾಲಯದ ಆರಂಭ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 130(490)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : –

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪಟೂರು ತಾಲ್ಲೂಕು ಕೊನೆಹಳ್ಳಿಯಲ್ಲಿ ಕೃಷಿ ಇಲಾಖೆಯ ಅಡಿಯಲ್ಲಿ ಸುಮಾರು ಒಂದು ಸಾವಿರ ಎಕರೆ ವಿಸ್ತೀರ್ಣದ ಅಮೃತಮಹಲ್ ಕಾವಲು ಮತ್ತು ವಿವಿಧ ರೀತಿಯ ಕೃಷಿ ಹಾಗೂ ಪಶುಸಂಗೋಪನಾ ಇಲಾಖೆಗಳ ತರಬೇತಿ ಕಾರ್ಯಕ್ರಮಗಳಿಗೆ ಸೌಲಭ್ಯಗಳಿರುವುದು ಸರ್ಕಾರದ ಗಮನದಲ್ಲಿದೆಯೇ.

ಆ) ಹಾಗಿದ್ದಲ್ಲಿ ಯಾವುದೇ ಕೃಷಿ ಆಧಾರಿತ ಕಾಲೇಜು ಇಲ್ಲದೆ ಇರುವ (ಕೃಷಿ ಪಶು ಸಂಗೋಪನಾ ರೇಷ್ಮೆ, ತೋಟಗಾರಿಕೆ ಇತರೆ) ತುಮಕೂರು ಜಿಲ್ಲೆಯಲ್ಲಿ ಪಶುವೈದ್ಯಕೀಯ ಕಾಲೇಜನ್ನು ಆರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಇ) ಕೊನೇಹಳ್ಳಿ ಸದರಿ ಕಾಲೇಜನ್ನು ಪ್ರಾರಂಭಿಸಲು ಸೂಕ್ತವಾದುದಲ್ಲವೇ.

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರ ನಿಲುವೇನು?

ಶ್ರೀ ಎನ್.ಹುಚ್ಚಮಾಸ್ತಿಗೌಡ(ಕೃಷಿ ಸಚಿವರು)

ಹೌದು

ತುಮಕೂರು ಜಿಲ್ಲೆಯಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪಿಸುವ ಅವಶ್ಯಕತೆ ಕಂಡು ಬಂದಿಲ್ಲ.

ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ನಾನು ಪಶುವೈದ್ಯ ಕಾಲೇಜನ್ನು ಪ್ರಾರಂಭ ಮಾಡಲಿಕ್ಕೆ ಆಗತ್ಯ ಏನಾದರೂ ಇದೆಯಾ? ಹಾಗೂ ಇದು ತುಮಕೂರು ಜಿಲ್ಲೆಯಲ್ಲಿ ಆಗುತ್ತದೆಯೇ ಎಂದು ಕೇಳಿದ್ದೇನೆ. ಸನ್ಮಾನ್ಯ ಸಚಿವರಿಗೆ ಪಶುವೈದ್ಯ ಇಲಾಖೆ ಬರುವುದಿಲ್ಲ ಎಂಬುದು ನನಗೆ ಗೊತ್ತು. ಯೂನಿವರ್ಸಿಟಿ ತಮಗೆ ಬರುತ್ತದೆ ಎನ್ನುವ ಕಾರಣಕ್ಕೆ ಕೇಳಿದ್ದೇನೆ. ತುಮಕೂರು ಜಿಲ್ಲೆಗೆ ಪಶುವೈದ್ಯ ಕಾಲೇಜಿನ ಆಗತ್ಯವಿಲ್ಲ ಎಂದು ತಾವು ಉತ್ತರ ಹೇಳಿಬಿಟ್ಟರೆ ಪಶುವೈದ್ಯ ಕಾಲೇಜ್ ರಾಜ್ಯಕ್ಕೇನಾದರೂ ಆಗತ್ಯವಿದೆಯಾ ಅಥವಾ ತುಮಕೂರಿನಲ್ಲಿ ಮಾಡ್ತೀರಾ ಎಂದು ಕೇಳಿರೋದು ಸ್ವಾಮಿ. ಅದಕ್ಕೆ ತಾವೇ ಉತ್ತರ ಕೊಡ್ತೀರಾ? ಅಥವಾ ನಿಮ್ಮ ಪಶುಸಂಗೋಪನಾ ಸಚಿವರು ಉತ್ತರ ಕೊಡ್ತಾರ? ಎಂದು ನಾನು ಕೇಳುತ್ತಿದ್ದೇನೆ. ಆಗತ್ಯಾನೇ ಇಲ್ಲ ಅಂದರೆ ನೀವು ಮಿನಿಸ್ಟ್ರು ಆಗಿ ಆಚೆಕಡೆ ನಿಂತು ಭಾಷಣ ಮಾಡಿ

ಇನ್ನೊಂದು ವೆಟರ್ನರಿ ಕಾಲೇಜ್ ಓಪನ್ ಮಾಡ್ತೀವಿ ಅಂತ ಏಕೆ ಭರವಸೆ ಕೊಡುತ್ತೀರಿ? ಇವರು ಕೋಆರ್ಡಿನೇಟ್ ಮಾಡಿ ರಿಪ್ಲೈ ಕೊಡಬೇಕು ಕಾಲೇಜ್ ಅಗತ್ಯ ಇಲ್ಲ ಎಂದು ಬರೆದುಕೊಟ್ಟು ಬಿಟ್ಟರೆ ಪ್ರಶ್ನೆ ಏಕೆ ನಾನು ಕೇಳಬೇಕು. ಸನ್ಮಾನ್ಯ ನಾಗೇಗೌಡರು ಆಚೆ ನಿಂತು ಹೇಳಿದ್ದಾರೆ, ಇನ್ನೊಂದು ಪಶುವೈದ್ಯ ಕಾಲೇಜನ್ನು ಆರಂಭ ಮಾಡುತ್ತಿದ್ದೇನೆ ಎಂದು ಅದು ನಿಜವೋ ಅಥವಾ ನೀವು ಹೇಳಿರೋದು ನಿಜವೋ ಅಂತ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ: ನನ್ನ ಬಾಯಿಯಲ್ಲಿ ಹೇಳೋ ಮಾತನ್ನು ಅವರು ಹೇಳುತ್ತಿದ್ದಾರೆ. ಇದು ಸ್ವಲ್ಪ ಆಶ್ಚರ್ಯಪಡಬೇಕಾದ್ದೇ ಯಾವುದೋ ಅಮೃತಮಹಲ್ ಕಾವಲಿಗೆ ಸೇರಿದ 1500 ಎಕರೆ ಜಮೀನು ತಿಪಟೂರು ತಾಲೂಕಿನಲ್ಲಿದೆ. ಅಷ್ಟಲ್ಲದೆ ಇನ್ಯಾವ ಸೌಕರ್ಯಗಳೂ ಇಲ್ಲ; ಅಲ್ಲಿ ಪಶುವೈದ್ಯ ಶಾಲೆ ಮಾಡುವುದಕ್ಕಾಗಲೀ ಅಥವಾ ಅದರ ಅವಶ್ಯಕತೆ ಎಷ್ಟಿದೆ ಅನ್ನುವುದಕ್ಕೆ ಅಂಕಿಅಂಶಗಳನ್ನು ಸಂಗ್ರಹಿಸಿ ನಾನು ಉತ್ತರ ಹೇಳಬೇಕಾಗಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ಇರುವ ಪರಿಸ್ಥಿತಿಯಲ್ಲಿ ಯಾವುದಕ್ಕೂ ಅವಕಾಶ ಇಲ್ಲ ಎಂದು ಅಷ್ಟು ಮಾತ್ರ ಹೇಳಿದ್ದೇನೆ. ಮಾನ್ಯ ಸದಸ್ಯರು ಇಷ್ಟಪಡುವುದಾದರೆ, ನಾನು ಇನ್ನು ಪಶುವೈದ್ಯಕ್ಕೆ ಸಂಬಂಧಪಟ್ಟಂತೆ ಕಾಲೇಜನ್ನು ಪ್ರಾರಂಭ ಮಾಡುವುದು ಅವಶ್ಯಕವೇ ಇಲ್ಲವೇ ಆ ಸ್ಥಳ ಎಷ್ಟರಮಟ್ಟಿಗೆ ಅನುಕೂಲವಾಗಿದೆ ಎನ್ನುವುದನ್ನು ತಿಳಿದು ಮುಂದಿನ ಅಧಿವೇಶನದಲ್ಲಿ ಇದಕ್ಕೆ ಸಾಕಾದಷ್ಟು ಉತ್ತರವನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: – ಕಾಲೇಜನ್ನು ಸ್ಥಾಪಿಸುವ ಅವಶ್ಯಕತೆ ಕಂಡುಬಂದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಈ ತರಹ ನೀವು ನಮಗೆ ಬ್ಲಾಕ್ ಮಾಡಿಬಿಟ್ಟು, ಆಮೇಲೆ ನಾನು ಅವರನ್ನು ಕೇಳಿ ಹೇಳುತ್ತೇವೆ ಅಂದರೆ ನಾವು ಯಾವ ಊರಿಗೆ ಹೋಗೋಣ. ನೀವು ರೆಕಾರ್ಡ್ ಮೇಲೆ ಅವಶ್ಯಕತೆ ಕಂಡುಬರಲಿಲ್ಲ ಅಂತ ಏಕಾಏಕಿ ಹೇಳಿಬಿಟ್ಟಿದ್ದೀರಿ; ಪರಿಶೀಲಿಸುತ್ತೇವೆ ಅಂತಲೂ, ಅವರ ಜೊತೆಯಲ್ಲಿ ಮಾತನಾಡುತ್ತೇನೆ, ಅಗತ್ಯವನ್ನು ಅವರು ಹೇಳಬೇಕು ಅಂತಲಾದರೂ ತಾವು ಉತ್ತರ ಹೇಳಿದ್ದರೆ ನನಗೆ ಸ್ವಲ್ಪ ಆಸೆ ಇರುತ್ತಿತ್ತು. ಏಕಾಏಕಿ ಸರ್ಕಾರ ಉತ್ತರ ಕೊಟ್ಟು ಅಗತ್ಯ ಕಂಡುಬಂದಿಲ್ಲ ಅಂದರೆ ನನಗೆ ಏನು ಉಳಿದಿದೆ ಇಲ್ಲಿ? ಅವರ ಜೊತೆಯಲ್ಲಿ ಮಾತನಾಡಿಯಾದರೂ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ: – ಈ ವಿಷಯ ಮೊದಲನೆಯ ಸಾರಿ ಬಂದಿಲ್ಲ. ಅಲ್ಲಿ ಜಮೀನು ಇದೆ ಅನ್ನುವುದರ ಮೇಲೆ ನಾನಾ ತರಹದ ಆಲೋಚನೆಗಳು ನಡೆದಿವೆ. ಅಲ್ಲಿ ಪಶುವೈದ್ಯಕ್ಕೆ ಸಂಬಂಧಪಟ್ಟ ಕಾಲೇಜನ್ನು ಪ್ರಾರಂಭ ಮಾಡಬಹುದೇ ಅಥವಾ ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂಥ ಕಾಲೇಜನ್ನು ಮಾಡಬಹುದೇ ಎಂದು ಇಂತಹ ಯೋಚನೆಗಳು ನಡೆದಿದೆ. ಆದರೆ ಅಲ್ಲಿ ಯಾವ ಸೌಕರ್ಯಗಳೂ ಇಲ್ಲ. ಆ ಪ್ರದೇಶದಲ್ಲಿ ಸಾಕಾದಷ್ಟು ನೀರು ಕೂಡ ಇಲ್ಲ ಅನ್ನುವುದು ನನಗೆ ಗೊತ್ತಿದೆ. ಆದರೆ ಮಾನ್ಯ ಸದಸ್ಯರು ಪೂರ್ತಿ ಪರೀಕ್ಷಿಸಿ ಉತ್ತರ ಕೊಡಬೇಕೆಂದು ಹೇಳಿದ್ದಾರೆ . ಆದಕ್ಕೋಸ್ಕರ ನಾನು ಪಶುವೈದ್ಯ ಮಂತ್ರಿಯವರೊಂದಿಗೆ ಸಮಾಲೋಚನೆ ನಡೆಸಿ ಆ ಸೌಕರ್ಯ ಏನಾದರೂ ಇಲ್ಲಿ ಕಲ್ಪಿಸಿ ಕೊಡುವುದಕ್ಕೆ ಸಾಧ್ಯವೇ ಏನು ಅನ್ನುವುದನ್ನು ತಿಳಿದು ಮುಂದಿನ ಅಧಿವೇಶನದಲ್ಲಿ ನಾನು ಅವರಿಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: – ನೀರಿಲ್ಲ, ಅನುಕೂಲ ಇಲ್ಲ ಅಂತ ಹೇಳಿದ್ದಾರೆ. ನನಗೆ ಅವರಿಗೆ ವ್ಯತ್ಯಾಸ ಈ ಸದನದಲ್ಲಿ ಉಳಿಯಬಾರದು. ಅವರು ಅಗ್ರಿಕಲ್ಚರಲ್ ಮಿನಿಸ್ಟರ್ ಆಗಿದ್ದಾರೆ. ಅವರ ಫಾರಂ ಇದೆ. ಇನ್ನೊಂದು ಕಡೆ ಅಜ್ಜಂಪುರದಲ್ಲಿ ಫಾರಂ ಇದೆ. ಈ ಕಡೆ ತುರುವೇಕೆರೆ ತಾಲ್ಲೂಕ್‌ನಲ್ಲಿ ಫಾರಂ ಇದೆ. ಅಲ್ಲಿ ಅನುಕೂಲ ಇಲ್ಲದಿದ್ದರೆ ನೂರಾರು ರಾಸುಗಳನ್ನು ಮೇಯುವುದಕ್ಕೆ ಏತಕ್ಕೆ

ಕಳುಹಿಸುತ್ತಿದ್ದೀರಿ, ಅಲ್ಲಿ ಬೋರ್‌ವೆಲ್ ಇಲ್ಲದಿದ್ದರೆ ನಿಮ್ಮ ದನಗಳು ಏನನ್ನು ಕುಡಿಯುತ್ತವೆ ಅನ್ನುವುದನ್ನು ತಾವು ಕರೆಸಿ ಕೇಳಿಸುತ್ತೀರಾ? ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಅದು ನನ್ನ ಕ್ಷೇತ್ರ ಅಲ್ಲ, ಮಾನ್ಯ ಮಂಜುನಾಥ್‌ರವರ ಕ್ಷೇತ್ರ. ಆದರೂ ಅನುಕೂಲ ಇದೆ ಅನ್ನುವಂತಹ ಒಂದೇ ಕಾರಣಕ್ಕಾಗಿ ನಾನು ಪ್ರಶ್ನೆ ಹಾಕಿದ್ದೇನೆ. ನೀವು ಹೀಗೆ ಹೇಳಬಾರದು. ತಾವು ಒಂದು ಸಾರಿ ಹೋಗಿ ನೋಡಿ; ತಾವು ಹೋಗಿ ನೋಡುವುದಿಲ್ಲ, ಮಾಡುವುದಿಲ್ಲ, ಏಕಾಏಕಿ ಈ ರೀತಿಯಾಗಿ ನಮಗೆ ಉತ್ತರ ಹೇಳಿದರೆ ನಮಗೆ ಇಲ್ಲಿ ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ದಯಮಾಡಿ ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಪರಿಶೀಲಿಸುತ್ತೇವೆ ಎಂದು ಮಾತ್ರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : – ಒಂದು ರಾಜ್ಯದಲ್ಲಿ ಪಶುವೈದ್ಯ ಶಾಲೆಯನ್ನು ಸ್ಥಾಪಿಸಬೇಕಾದರೆ ಏನೇನು ಬೇಕು ಎನ್ನತಕ್ಕದ್ದು ಸರ್ಕಾರದವರು ಪರಿಣಿತರ ಮೂಲಕ ಪಂಡಿತರ ಮೂಲಕ ವಿಚಾರವನ್ನು ವರದಿ ತರಿಸಿಕೊಂಡು ಅದರ ಆಗುಹೋಗುಗಳು ಏನೆಂದು ತಿಳಿದುಕೊಂಡು ಮಾಡತಕ್ಕದ್ದು ಸಹಜ. ಈಗಾಗಲೇ ಪಶುವೈದ್ಯ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳು ಒಂದು ರಾಜ್ಯದಲ್ಲಿ ಪಶುವೈದ್ಯ ಕಾಲೇಜನ್ನು ಸ್ಥಾಪಿಸುತ್ತೇವೆಂದು ಹೇಳಿದ್ದಾರೆ. ಈಗ ಪ್ರಪಂಚದಲ್ಲೇ ಬಹಳ ಪ್ರಸಿದ್ಧಿಯಾದಂತಹ ಅಮೃತಮಹಲ್ ತಳಿ ಇರತಕ್ಕಂಥ ಸ್ಥಳ ಇದಾಗಿದೆ. ಭೂಮಿಯೇ ಪ್ರಾಮುಖ್ಯ ಇಲ್ಲ. ಭೂಮಿಗಿಂತ ತಳಿ ಪ್ರಾಮುಖ್ಯವಾದುದು. ಬ್ರಿಟಿಷರ ಕಾಲದಲ್ಲಿ ಅಮೃತ್‌ಮಹಲ್ ತಳಿಗಳು ಬಹಳ ಪ್ರಸಿದ್ಧಿಯಾಗಿದ್ದವು. ಮದ್ದು ಗುಂಡುಗಳ ದೊಡ್ಡಗಾಡಿಗಳನ್ನು ಎಳೆಯತಕ್ಕಂಥ ಶಕ್ತಿ ಇರುವಂಥದ್ದು ಎಂದು ಕೇಳಿದ್ದೆ. ಬೀರೂರ್‌ನಲ್ಲಿ ಒಂದು ಅಮೃತ್‌ಮಹಲ್ ಬ್ರೀಡಿಂಗ್ ಸ್ಟೇಷನ್ ಇದೆ. ಅಲ್ಲಿ ಬೇಕಾದಷ್ಟು ಅನುಕೂಲಗಳು ಇದೆ. ಎಲ್ಲಾದರೂ ಒಂದು ಕಡೆ ಕಾಲೇಜನ್ನು ಮಾಡುವ ಕಾಲದಲ್ಲಿ ಇವೆಲ್ಲವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಅವರು ಇಂತಹ ಊರಿನಲ್ಲಿ ಮಾಡಿ ಎಂದು ಹೇಳಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಕೃಷಿ ಮಂತ್ರಿಗಳು ಇದೆಲ್ಲವನ್ನೂ ಪರಿಗಣನೆಗೆ ತೆಗೆದುಕೊಂಡು ಇದನ್ನು ದೀರ್ಘವಾಗಿ ಪರಿಶೀಲಿಸಿ ಮಾಡಬೇಕು. ನಾನು ಹಿಂದೆ ಕೃಷಿ ಮಂತ್ರಿಯಾಗಿದ್ದರ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : – ತಾವು ಉಪಪ್ರಶ್ನೆಯನ್ನು ಕೇಳಿ.

ಶ್ರೀ ಎನ್.ಚಿಕ್ಕೇಗೌಡ : – ಅಲ್ಲಿ ಒಂದು ಕಾಲೇಜನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ. ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಲಿ; ಮಂತ್ರಿಗಳು ಏನು ಉತ್ತರ ಹೇಳುತ್ತಾರೆ ಹೇಳಲಿ.

ಶ್ರೀ ಎನ್.ಹುಚ್ಚಮಾಸ್ತಿಗೌಡ : – ಈಗಾಗಲೇ ಈ ಪ್ರಶ್ನೆಯನ್ನು ಕಳುಹಿಸಿದಂತಹ ಸ್ನೇಹಿತರಿಗೆ ನಾನು ಉತ್ತರವನ್ನು ಹೇಳಿದ್ದೇನೆ. ಇದರ ಬಗ್ಗೆ ಸಂಬಂಧಪಟ್ಟಂಥ ಮಂತ್ರಿಗಳ ಜೊತೆಯಲ್ಲಿ ಇದರ ಅವಶ್ಯಕತೆ ಎಷ್ಟಿದೆ ಅನ್ನುವುದರ ಬಗ್ಗೆ ಬೇರೆಬೇರೆ ವಿಷಯಗಳನ್ನು ಸಂಗ್ರಹಿಸಿ ನಾನು ಸಮರ್ಪಕವಾದಂತಹ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದೆನೆ. ಅದೇ ಉತ್ತರ ಮಾನ್ಯ ಚಿಕ್ಕೇಗೌಡರಿಗೂ ಅನ್ವಯಿಸುತ್ತದೆ.

ವಿಷಯ : – ಮೂರ್ತೆದಾರರ ಸಹಕಾರ ಸಂಘಗಳನ್ನು ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 132(613)

ಶ್ರೀ ಕೆ. ಸೋಮಪ್ಪ ಸುವರ್ಣ(ಮೂಡಬಿದರೆ) : – ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.